

# ರಂಗನ ತೋಟ

ನನ್ನ ಗೆಳೆಯ ರಂಗನು
ಅವನು ತುಂಬ ಜಾಣನು
ಮನೆಯ ಮುಂದೆ ಆತನು
ಚಿಕ್ಕ ತೋಟ ಮಾಡಿದನು

ಸಲಿಕೆ ಗುದ್ದಲಿ ಹಿಡಿದುಕೊಂಡು
ನಿತ್ಯ ಕಾಯಕ ಮಾಡಿದನು
ಮಡಿಯ ಮಾಡಿ ಬೀಜ ಹಾಕಿ
ನೀರನುಣಿಸಿ ಸಲಹಿದನು

ಕೆಲವು ದಿನಗಳು ಸರಿಯಲು
ಮೊಳಕೆ ಮೇಲೆ ಬಂದವು
ಕಳೆಯ ಕಿತ್ತು ಗೊಬ್ಬರ ಹಾಕಲು
ಪುಷ್ಪವಾಗಿ ಬೆಳೆದವು

ಋತುಮಾನಕೆ ಸರಿಯಾಗಿ
ಬಗೆ ಬಗೆ ಹೂವು ಅರಳಿದವು
ಮಧುವನು ಹೀರಲು ದುಂಬಿಗಳು
ಝೇಂಕಾರ ಮಾಡುತ ಬಂದವು

ತೋಟವ ನೋಡಿ ಶಾಲಾ ಮಕ್ಕಳು
ಹಿರಿ ಹಿರಿ ಹಿಗ್ಗಿ ಕುಣಿದಾಡಿದರು
ರಂಗನ ಸಾಧನೆ ಮೆಚ್ಚಿದ ಗುರುಗಳು
ಬಹುಮಾನವಿತ್ತು ಕೊಂಡಾಡಿದರು

**-ಆರ್.ಎಸ್. ಚಾಪಗಾವಿ,**
**ಬೆಳಗಾವಿ**

# ಕಾಗೆ. ಕೋಗಿಲೆಗಳೇ. ಗೂಡೆಲ್ಲಿ?

ಕೋಗಿಲೆ
ಕುಹೂ ಕುಹೂ ಎಂದು ಕೂಗುವ
ಕೋಗಿಲೆಯೇ ಎಲ್ಲಿದೆ ನಿನ್ನ ಗೂಡು?
ಮಾವಿನ ಮರದ ಎಲೆ ಮರೆಯೊಳಗೆ
ಕೂತಿಹೆ ನಾನು, ನೋಡು

ಕಾಗೆ
ಕಾ ಕಾ ಎಂದು ಕಾಡುವ
ಕಾಗೆಯೇ ಎಲ್ಲಿದೆ ನಿನ್ನ ಗೂಡು?
ಗಿಡದೆತ್ತರದಲಿ ಕಟ್ಟಿಕೊಂಡಿರುವೆ
ಅಲ್ಲೇ ನನ್ನಯ ಬೀಡು

ಗೀಜಗ
ಸೋಜಿಗವಾಗಿದೆ ನಿನ್ನಯ ನೋಡಿ
ಗೀಜಗನೇ, ಎಲ್ಲಿರುವೆ ಹೇಳು?
ಮರ ಗಿಡ ಕೊಂಬೆಯಲಿ ಜೋತಿದೆ
ನಾನೇ ಹೆಣೆದಿಹ ಚೀಲವ ನೋಡು

ಹಾವು
ಸರ ಸರ ಸಾಗುವ ಕಾಲಿಲ್ಲದ
ಹಾವೇ, ನೀನೆಲ್ಲಿಂದಾ ಬರುವೆ?
ಗಿಡ ಗಂಟಿಯ ಹುತ್ತದ ಡೊಂಬಲಿ
ಮೈಸುರುಳಿ ಮಾಡಿ ಮಲಗಿರುವೆ

**-ಸುಜಾತಾ ನಾರಾಯಣಗೌಡ, ಹನುಮಂತಿ**

